(ಲಕ್ಷ್ಮಣ ಸ. ಸವದಿ)
ಸಹಕಾರ ಸಚಿವರು.

(ಆರ್.ಎಸ್.ಹುಚ್ಚಾಚಾರಿ)
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

ಕರ್ನಾಟಕ ವಿಧಾನ ಸಭೆ

418 ಶ್ರೀ ಹೆಚ್.ಕೆ.ಕುಮಾರಸ್ವಾಮಿ (ಸಕಲೇಶಪುರ)

ಅ) ರಾಜ್ಯದಲ್ಲಿ ತಾಲ್ಲೂಕು ಮಟ್ಟದ ಕಾರ್ಯವ್ಯಾಪ್ತಿಯ ಸಹಕಾರ ಸಂಘಗಳೆಷ್ಟು ಹಾಗೂ ಇವುಗಳ ಹೆಸರು ಮತ್ತು ವಿಳಾಸ ನೀಡುವುದು.

ರಾಜ್ಯದಲ್ಲಿ ತಾಲ್ಲೂಕು ಮಟ್ಟದ ಕಾರ್ಯವ್ಯಾಪ್ತಿಯ ಸಹಕಾರ ಸಂಘಗಳು ದಿನಾಂಕ 31.03.2008ಕ್ಕೆ ಇದ್ದಂತೆ 2028 ಇರುತ್ತವೆ.

ಆ) ಇವುಗಳಲ್ಲಿ ನಿಷ್ಕ್ರಿಯ ಸಹಕಾರಿ ಸಂಘಗಳೆಷ್ಟು ಹಾಗೂ ಕ್ರಿಯಾಶೀಲ ಸಹಕಾರ ಸಂಘಗಳೆಷ್ಟು; ಈ ಸಂಘಗಳು ನಿಷ್ಕ್ರಿಯಗೊಳ್ಳಲು ಕಾರಣಗಳೇನು?

ಇವುಗಳಲ್ಲಿ ನಿಷ್ಕ್ರಿಯ ಸಹಕಾರ ಸಂಘಗಳು 237 ಇದ್ದು, ಕ್ರಿಯಾಶೀಲ ಸಹಕಾರ ಸಂಘಗಳು 1480 ಇರುತ್ತವೆ.

ಸಂಘಗಳು ನಿಷ್ಕ್ರಿಯಗೊಳ್ಳಲು ಹಲವಾರು ಕಾರಣಗಳಿದ್ದು, ಅವುಗಳಲ್ಲಿ ಮುಖ್ಯವಾದವುಗಳು;

1. ಬೆಳೆಗೆ ಉತ್ತಮ ಬೆಲೆ ದೊರೆಯದ ಕಾರಣ ಸಾಲ ವಸೂಲಾತಿ ಕುಂಠಿತವಾಗಿರುತ್ತದೆ.
2. ಸಂಘಗಳಲ್ಲಿ ಕಾಲಕಾಲಕ್ಕೆ ನಡೆದಿರುವ ಹಣದುರುಪಯೋಗ ಪ್ರಕರಣಗಳು ಹೆಚ್ಚುತ್ತಿರುವುದರಿಂದ
3. ಸಂಘಗಳ ವ್ಯವಹಾರದ ನಿರ್ವಹಣೆ ಸರಿಯಿಲ್ಲದ ಕಾರಣ

ಇ) ಕಳೆದ ಮೂರು ವರ್ಷಗಳಿಂದ ವರ್ಷವಾರು ಆಡಿಟ್ ಮಾಡಲಾಗಿರುವ ತಾಲ್ಲೂಕುಮಟ್ಟದ ಕಾರ್ಯವ್ಯಾಪ್ತಿಯ ಸಹಕಾರ ಸಂಘಗಳೆಷ್ಟು? (ವಿವರ ನೀಡುವುದು) ಇದೇ ಅವಧಿಯಲ್ಲಿ ತಾಲ್ಲೂಕು ಮಟ್ಟದ ಕಾರ್ಯ ವ್ಯಾಪ್ತಿಯಲ್ಲಿ, ಪುನರ್ ಆಡಿಟ್ ಮಾಡಲಾಗಿರುವ ಸಂಘಗಳೆಷ್ಟು? (ವಿವರ ನೀಡುವುದು)

ಕಳೆದ 3 ವರ್ಷಗಳಿಂದ ವರ್ಷವಾರು ಆಡಿಟ್ ಮಾಡಲಾಗಿರುವ ತಾಲ್ಲುಕು ಮಟ್ಟದ ಕಾರ್ಯಾವ್ಯಾಪ್ತಿಯ ಸಹಕಾರ ಸಂಘಗಳ ವಿವರ ಕೆಳಕಂಡಂತಿರುತ್ತದೆ.

1-4-2005 ರಿಂದ 31-3-2006

	ಸಂಘಗಳ ಕಾರ್ಯಸ್ಥಿತಿ	

ವಿವರ	ಕಾರ್ಯನಿರತ	ನಿಷ್ಕ್ರಿಯ	ಸಮಾಪನಾ	ಒಟ್ಟು
ಲೆಕ್ಕ ಪರಿಶೋಧನೆಗೆ ಇದ್ದ ಸಹಕಾರ ಸಂಘಗಳ ಸಂಖ್ಯೆ	1689	254	215	2158
ಲೆಕ್ಕ ಪರಿಶೋಧನೆ ಆದ ಸಹಕಾರ ಸಂಘಗಳ ಸಂಖ್ಯೆ	**1384**	72	79	1535
ಉಳಿಕೆ	**305**	**182**	**136**	**623**

1-4-2006 ರಿಂದ 31-3-2007

ವಿವರ	ಸಂಘಗಳ ಕಾರ್ಯಸ್ಥಿತಿ			ಒಟ್ಟು
	ಕಾರ್ಯ ನಿರತ	ನಿಷ್ಕ್ರಿಯ	ಸಮಾ ಪನಾ	
ಲೆಕ್ಕ ಪರಿಶೋಧನೆಗೆ ಇದ್ದ ಸಹಕಾರ ಸಂಘಗಳಸಂಖ್ಯೆ	1836	242	232	2310
ಲೆಕ್ಕ ಪರಿಶೋಧನೆ ಆದ ಸಹಕಾರ ಸಂಘಗಳ ಸಂಖ್ಯೆ	1444	64	94	1602
ಉಳಿಕೆ	**392**	**178**	**138**	**708**

1-4-2007 ರಿಂದ 31-3-2008

ವಿವರ	ಸಂಘಗಳ ಕಾರ್ಯಸ್ಥಿತಿ			ಒಟ್ಟು
	ಕಾರ್ಯ ನಿರತ	ನಿಷ್ಕ್ರಿಯ	ಸಮಾ ಪನಾ	
ಲೆಕ್ಕ ಪರಿಶೋಧನೆಗೆ ಇದ್ದ ಸಹಕಾರ ಸಂಘಗಳ ಸಂಖ್ಯೆ	1802	240	183	2225
ಲೆಕ್ಕ ಪರಿಶೋಧನೆ ಆದ ಸಹಕಾರ ಸಂಘಗಳ ಸಂಖ್ಯೆ	1409	62	85	1556
ಉಳಿಕೆ	**393**	**178**	**98**	**669**

ಕಳೆದ ಮೂರು ವರ್ಷಗಳಲ್ಲಿ ಲೆಕ್ಕಪರಿಶೋಧನೆಯಾಗಿರುವ ತಾಲ್ಲೂಕು ಮಟ್ಟದ ಕಾರ್ಯಾವ್ಯಾಪ್ತಿಯ ಸಹಕಾರ ಪುನರ್ ಆಡಿಟ್ ಕಳೆದ ಮೂರು ವರ್ಷಗಳಲ್ಲಿ ನಡೆದಿರುವುದಿಲ್ಲ.

ಈ) ಪುನರ್ ಆಡಿಟ್ ಮಾಡಿದ ತಾಲ್ಲೂಕು ಮಟ್ಟದ ಕಾರ್ಯವ್ಯಾಪ್ತಿಯ ಸಹಕಾರ ಸಂಘಗಳಲ್ಲಿ ಯಾವ ಲೋಪದೋಷಗಳನ್ನು ಕಂಡು ಹಿಡಿಯಲಾಗಿದೆ? ಹಾಗೂ ಈ ಬಗ್ಗೆ ತೆಗೆದುಕೊಳ್ಳಲಾಗಿರುವ ಕ್ರಮಗಳೇನು?

ಪುನರ್ ಆಡಿಟ್ ನಡೆಯದೇ ಇರುವುದರಿಂದ ಅನ್ವಯಿಸುವುದಿಲ್ಲ.

ಉ) ಕಳೆದ 3 ವರ್ಷಗಳಿಂದ ವರ್ಷವಾರು ಆಡಿಟ್ ಮಾಡಿದ ತಾಲ್ಲೂಕು ಮಟ್ಟದ ಕಾರ್ಯವ್ಯಾಪ್ತಿಯ ಸಹಕಾರ ಸಂಘಗಳ ಪೈಕಿ ಪುನರ್ ಆಡಿಟ್ ಮಾಡಲಾದ ಸಹಕಾರ ಸಂಘಗಳಲ್ಲಿ ಮೂಲ ಆಡಿಟ್‌ನಲ್ಲಿಲ್ಲದ ಲೋಪದೋಷಗಳು ಕಂಡು ಬಂದಿದ್ದಲ್ಲಿ, ಆಡಿಟ್ ಮಾಡಿದ ಅಧಿಕಾರಿಗಳ ಹಾಗೂ ಮೇಲ್ವಿಚಾರಣೆ ಮಾಡಿದ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಳ್ಳಲಾಗಿದೆ?

ಪುನರ್ ಆಡಿಟ್ ನಡೆಯದೇ ಇರುವುದರಿಂದ ಅನ್ವಯಿಸುವುದಿಲ್ಲ.

ಸಂಖ್ಯೆ: ಸಿಓ 42 ಸಿಎಲ್‌ಎಂ 2009

ಸಹಿ/–
(ಲಕ್ಷ್ಮಣ. ಸ. ಸವದಿ)
ಸಹಕಾರ ಸಚಿವರು.

(ಆರ್.ಎಸ್.ಹುಚ್ಚಾಚಾರಿ)
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

ಕರ್ನಾಟಕ ವಿಧಾನ ಸಭೆ
13ನೇ ವಿಧಾನಸಭೆ 2ನೇ ಅಧಿವೇಶನ

421 ಶ್ರೀ.ಎನ್.ಸಂಪಂಗಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು.

ಅ) ಕೋಲಾರ ಜಿಲ್ಲೆಯಲ್ಲಿ ಗುರುತಿಸಲಾದ ಸ್ವಸಹಾಯ ಮತ್ತು ಸ್ತ್ರೀಶಕ್ತಿ ಗುಂಪುಗಳ ಸಂಖ್ಯೆ ಎಷ್ಟು; ಅವರುಗಳಿಗೆ ನೀಡಿರುವ ಯೋಜನೆಗಳಾವುವು;

ಇಲಾಖೆಯಿಂದ ಜಾರಿಗೊಳಿಸಲಾಗುತ್ತಿರುವ ಸ್ತ್ರೀಶಕ್ತಿ ಯೋಜನೆಯಡಿ 3936 ಗುಂಪುಗಳನ್ನು ಕೋಲಾರ ಜಿಲ್ಲೆಯಲ್ಲಿ ರಚಿಸಲಾಗಿದೆ. ಜಿಲ್ಲೆಯಲ್ಲಿ ರಚಿಸಲಾಗಿರುವ ಇತರೆ ಸ್ವಸಹಾಯ ಗುಂಪುಗಳು ಈ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ. ಯೋಜನೆಯ ವ್ಯಾಪ್ತಿಗೆ ಒಳಪಟ್ಟಂತೆ ಗುಂಪುಗಳು ಉತ್ತಮವಾಗಿ ನಿರ್ವಹಿಸಲು ಅಗತ್ಯವಿರುವ ವಿವಿಧ ತರಬೇತಿಗಳನ್ನು ನೀಡಲಾಗಿದ್ದು, ರಚನೆಯಾದ 3936 ಗುಂಪುಗಳಿಗೆ ತಲಾ ರೂ.5000/– ರಂತೆ ಸುತ್ತುನಿದಿ ನೀಡಲಾಗಿದೆ. ವಿವಿಧ ಕೌಶಲ್ಯಗಳ ಅಭಿವೃದ್ಧಿಗೆ ತರಬೇತಿ, ಅಧಿಕ ಉಳಿತಾಯ ಮಾಡಿದ ಗುಂಪುಗಳಿಗೆ ಪ್ರೋತ್ಸಾಹ ಧನ ಆದಾಯೋತ್ಪನ್ನ ಚಟುವಟಿಕೆಗಳನ್ನು ಕೈಗೆತ್ತಿಕೊಂಡಿರುವ ಗುಂಪುಗಳಿಗೆ ಪ್ರೋತ್ಸಾಹ ಧನ, ಗುಂಪುಗಳು ಉತ್ಪಾದಿಸುವ ವಸ್ತುಗಳಿಗೆ